ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್
ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೧೯
...ನೇ ವರ್ಷ ೯ನೇ ಸಂಚಿಕೆ ಕೊಪ್ಪ ೨೧-೧೦-೧೯೮೪ ಭಾನುವಾರ ಬೆಲೆ ೨೦ ಪೈಸೆ

ಗೋವೆಗೆ ಜನರನ್ನು 'ಮಾರಿದ' ಆರೋಪಿಗಳ ಬಂಧನ

ಕೊಪ್ಪ: ಒಂದು ವಾರದಿಂದ ಇಲ್ಲಿ ಹಾಗೂ ಸುತ್ತ ಮುತ್ತ ಆತಂಕ ಮಿಶ್ರಿತ ಕುತೂಹಲ ಹಬ್ಬಿಸಿದ್ದ, ಗೋವಕ್ಕೆ ಮನುಷ್ಯರನ್ನು ಮಾರಿರುವುದಾಗಿ ಹೇಳಲಾಗಿದ್ದ ಪ್ರಕರಣ ಒಂದು ರೀತಿಯಲ್ಲಿ ಕೊನೆಗೊಂಡಿದೆ.

ಗೋವಕ್ಕೆ ತೆರಳಿದ್ದ ಸಬ್ ಇನ್ಸ್‌ಪೆಕ್ಟರ್ ಶಶಿಕುಮಾರ್ ಮತ್ತು ತಂಡ ಇನ್ನೂ ೬ ಮಂದಿಯನ್ನು ಹಿಂದಕ್ಕೆ ಕರೆತಂದಿದ್ದು, ಖಾದರ್, ಹಂಜಾ ಮತ್ತು ಗಂಗಾಧರ್ ಎಂಬವರನ್ನು ಬಂಧಿಸಿ ನ.ರಾ.ಪುರ ನ್ಯಾಯಾಲಯದಲ್ಲಿ ಹಾಜರ್ಪಡಿಸಿದ್ದಾರೆ. ಖಾದರನ ಕಾರನ್ನು (ಕೆಆರ್‌ಸಿ ೫೧೪) ವಶಪಡಿಸಿಕೊಳ್ಳಲಾಗಿದೆ.

ಹಿನ್ನೆಲೆ

ರಾಯಪ್ಪ ಎಂಬ ವ್ಯಕ್ತಿ ಪೋಲೀಸರಿಗೆ ನೀಡಿದ ದೂರಿನಲ್ಲಿ. ಕೊಪ್ಪ ಮತ್ತು ಸುತ್ತಮುತ್ತಲಿಂದ ಕೊಪ್ಪದ ಖಾದರ್ ಎಂಬ ವ್ಯಕ್ತಿ ೫೭ ಮಂದಿ ಕೆಲಸದಾಳುಗಳನ್ನು ಗೋವಾದ ಯೋಜನಾ ಪ್ರದೇಶವೊಂದಕ್ಕೆ ಒಯ್ದು ತಲಾ ೨ ಸಾವಿರ ರೂ.ನಂತೆ ಮಾರಿದ್ದಾನೆ. ಅಲ್ಲಿ ಬೆಳಗಿನ ೫ ಗಂಟೆಯಿಂದ ರಾತ್ರಿ ೭ರ ತನಕ ಚಾಟಿ, ಚೂರಿ ಹಿಡಿದುಕೊಂಡು ದುಡಿಸಲಾಗುತ್ತಿದೆ. ಡ್ರಂನಲ್ಲಿ ಗಂಜಿ ಕಾಯಿಸಿ ಹಾಕುತ್ತಾರೆ. ಸಂಬಳವಿಲ್ಲ. ತಪ್ಪಿಸಿಕೊಳ್ಳದಂತೆ ಕಾವಲಿರುತ್ತಾರೆ. ನಾವು ೬ ಮಂದಿ ಹೇಗೋ ಕಾಡಿಗೆ ಬಿದ್ದು ತಪ್ಪಿಸಿಕೊಂಡು ನಡೆಯುತ್ತಲೇ ಬಂದೆವು. ಇನ್ನುಳಿದವರು ಅಲ್ಲೇ ಇದ್ದಾರೆ.... ಮುಂತಾಗಿ ದೂರಲಾಗಿತ್ತು. ಅವರೆಲ್ಲರ ಕಾಲುಗಳು ಬಾತುಹೋಗಿದ್ದವು.

ವಿಷಯ ಊರಲ್ಲಿ ಗುಲ್ಲಾಗಿ, ಗಣ್ಯರ ನಿಯೋಗವೂ ಬಂದು, ಪೋಲೀಸರು ಕೂಡಲೇ ಖಾದರನ ಕಾರನ್ನು ವಶಪಡಿಸಿಕೊಂಡರು. ಅವನನ್ನು ಕರೆದುಕೊಂಡು ಸಬ್ ಇನ್ಸ್‌ಪೆಕ್ಟರ್ ಶಶಿಕುಮಾರ್ ಮತ್ತು ತಂಡ ಗೋವಾಕ್ಕೆ ತೆರಳಿತು.

ಪೊರಿಯಾ, ಸತ್ತಾಡ ಮತ್ತು ಕಣ್ಕಾಣಿಗಳಲ್ಲಿ ಹೆದ್ದಾರಿ ಕೆಲಸಗಳಲ್ಲಿ ತೊಡಗಿದ್ದ ಕೂಲಿಯಾಳುಗಳನ್ನು ಕಂಡು, ಅವರ ಪರಿಸ್ಥಿತಿಯನ್ನು ಪರಿಶೀಲಿಸಿ, ಅವರೆಲ್ಲ ಊರಿಗೆ ಮರಳಬಹುದೆಂದೂ, ಯಾರಿಂದಲೂ ಏನೂ ಅಪಾಯವಾಗದಂತೆ ರಕ್ಷಣೆ ನೀಡುವುದಾಗಿಯೂ ಶಶಿಕುಮಾರ್ ತಿಳಿಸಿದಾಗ ೫ ಜನ ಮಾತ್ರ (ಮತ್ತು ಅವರ ಒಂದು ಮಗು) ಬರಲು ಒಪ್ಪಿದರು. ಇನ್ನೂ ೨೦-೨೫ ಜನ ತಾವು ಅಲ್ಲೇ ಉಳಿಯುವುದಾಗಿ ಹೇಳಿದರು. ಸುಮಾರು ೨೦ ಜನ ಅಲ್ಲಿಂದ ಆಗಲೇ ತಪ್ಪಿಸಿಕೊಂಡು ಎಲ್ಲೋ ಹೋಗಿರುವುದಾಗಿ ತಿಳಿದುಬಂತು.

ಬಂಧನ

ಸಬ್ ಇನ್ಸ್‌ಪೆಕ್ಟರ್ ಶಶಿಕುಮಾರ್ ಅವರ ಪರಿಶೀಲನೆಯಿಂದ ತಿಳಿದು ಬಂದಂತೆ, ಬೆಳಗಿನ ಜಾವ ಕಟ್ಟಾ ಚಹ, ೧೦ ಗಂಟೆಗೆ ಗಂಜಿ, ಮಧ್ಯಾಹ್ನ ಮತ್ತು ರಾತ್ರಿ ಊಟ, ಸಂಜೆ ಕಟ್ಟಾ ಚಹಾ—ಇಷ್ಟು 'ಆಹಾರ' ಕೊಡಲಾಗುತ್ತಿತ್ತು. ಗಂಜಿಯನ್ನು ದೊಡ್ಡ ಅಲ್ಯುಮಿನಿಯಂ ಚರಿಗೆಗಳಲ್ಲಿ ಬೇಯಿಸುತ್ತಿದ್ದರು. ಡ್ರಂಗಳಲ್ಲಲ್ಲ. ಅವರನ್ನು ಮಾರಾಟ ಮಾಡಿದ್ದಲ್ಲವೆಂದೂ, ಅವರಿಗೇ ಮುಂಗಡಕೊಟ್ಟು ಗಂಡಾಳಿಗೆ ದಿನಗೂಲಿ ೧೫ ರೂ.....ಮುಂತಾಗಿ ಸಂಬಳ ಕೊಟ್ಟು ಇಟ್ಟುಕೊಂಡಿದ್ದು ಅವರಿಂದಲೇ ೫ ಸಾವಿರ ರೂ. ತಮಗೆ ಬಾಕಿ ಇರುವುದಾಗಿಯೂ, ಅಲ್ಲಿ ಕಂಟ್ರಾಕ್ಟ್ ಮಾಡಿಸುತ್ತಿರುವ ಹಂಜಾ ಮತ್ತು ಖಾದರ್ ಸೋದರರೆಂದೂ ಅವರುಗಳು ಹೇಳಿಕೊಂಡರು.

ಅಂತೂ ಅವರನ್ನೆಲ್ಲ ಬಂಧಿಸಿ, ಬಿಚೋಲಿಂ ನ್ಯಾಯಾಲಯದಲ್ಲಿ ಹಾಜರ್ಪಡಿಸಿ, ಊರಿಗೆ ಕರೆತರಲಾಯಿತು. ಮುಂದಿನ ಕ್ರಮ ಜರುಗಿಸಲಾಗುತ್ತಿದೆ.

ಕಳ್ಳರ ಸೆರೆ; ವಸ್ತು ವಶ

ಕೊಪ್ಪ: ಇಲ್ಲಿನ ಪೋಲೀಸರು ಅ. ೩ರಂದು ಪಚ್ಚಮುತ್ತು, ನಾಗರಾಜ, ನಾರಾಯಣ, ಇಕ್ಬಾಲ್, ಖಾದರ್ (ಎಲ್ಲ ಕೊಪ್ಪದವರು) ಎಂಬವರನ್ನು ಬಂಧಿಸಿ, ಅವರಿಂದ ಸುಮಾರು ೪ ಸಾವಿರ ರೂ. ಕಳವಿನ ಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ. ಪಚ್ಚಮುತ್ತು, ನಾಗರಾಜ ಉತ್ತಮೇಶ್ವರ, ... ಸಂಘಗಳಲ್ಲೂ ಹಲವು ಅಂಗಡಿಗಳಲ್ಲೂ ಕಳವು ಮಾಡುತ್ತಿದ್ದರೆನ್ನಲಾಗಿದೆ.

ಕೊಪ್ಪದ ಲಯನ್ಸ್ ಕ್ಲಬ್ ಆಶ್ರಯದಲ್ಲಿ

ಲ॥ ಡಾ॥ ನಂಜುಂಡ ರಾವ್ ಅವರಿಂದ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರ

ಕೊಪ್ಪ: ಮದ್ರಾಸಿನ ಸುಪ್ರಸಿದ್ಧ ಸರ್ಜನರೂ ಪ್ರೊಫೆಸರರೂ ಆಗಿದ್ದು ಈಗ ನಿವೃತ್ತರಾಗಿ ತಮ್ಮ ಪೂರ್ಣಾವಧಿಯನ್ನು ಲಯನ್ಸ್ ಸಂಸ್ಥೆಯ ಮೂಲಕ ಸೇವೆಗಾಗಿಯೇ ಮೀಸಲಿಟ್ಟಿರುವ ಲ॥ ಡಾ॥ ಆರ್. ನಂಜುಂಡ ರಾವ್ ಅವರು ತಮ್ಮ ಸಹಾಯಕರೊಂದಿಗೆ ಪ್ರತೀ ಮೂರು ತಿಂಗಳಿಗೊಮ್ಮೆ ಶೃಂಗೇರಿಯ ಧನ್ವಂತರಿ ಆಸ್ಪತ್ರೆಗೆ ಭೇಟಿ ಕೊಟ್ಟು ಶಸ್ತ್ರಚಿಕಿತ್ಸೆ ಅಗತ್ಯವಾಗಿರುವ ಸುತ್ತಮುತ್ತಲ ರೋಗಿಗಳಿಗೆ ಉಚಿತವಾಗಿ ಶಸ್ತ್ರ ಚಿಕಿತ್ಸೆ ನಡೆಸುವರು.

ಈ ವಿಷಯ 'ಮುಂಜಾವು'ಗೆ ತಿಳಿಸಿದ ಕೊಪ್ಪ ಲಯನ್ಸ್ ಕ್ಲಬ್ ಅಧ್ಯಕ್ಷ ಡಾ॥ ಮೋಹನ ಶೆಟ್ಟಿ. ಈ ಶಿಬಿರಕ್ಕೆ ಸುತ್ತಮುತ್ತಲ ಖಾಸಗಿ ವೈದ್ಯರುಗಳೂ ರೋಗಿಗಳನ್ನು ರೆಫರ್ ಮಾಡಬಹುದಾಗಿರುತ್ತದೆ. ಶಸ್ತ್ರಚಿಕಿತ್ಸೆ ಅಗತ್ಯವೆಂದು ವೈದ್ಯರಿಂದ ತಿಳಿಸಲ್ಪಟ್ಟಿರುವ ರೋಗಿಗಳೂ ಸಹ ಇದರ ಪ್ರಯೋಜನ ಪಡೆಯಬಹುದು. ಅಗತ್ಯವಿರುವವರು ಕೊಪ್ಪ ಲಯನ್ಸ್ ಕ್ಲಬ್ಬಿನ ಪದಾಧಿಕಾರಿಗಳನ್ನು ಸಂಪರ್ಕಿಸಿದಲ್ಲಿ ಅಗತ್ಯ ಮಾರ್ಗದರ್ಶನಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಶಸ್ತ್ರಚಿಕಿತ್ಸೆ ಶಿಬಿರ ಬರುವ ಡಿಸೆಂಬರಿನಲ್ಲಿ ನಡೆಯುವ ನಿರೀಕ್ಷೆಯಿದ್ದು, ಖಚಿತವಾದ ದಿನವನ್ನು ಮುಂದೆ ತಿಳಿಸುವುದಾಗಿ ಅವರು ಹೇಳಿದರು.

ಮಕ್ಕಳ ದಿನಾಚರಣೆಯಂದು

ಲಯನ್ಸ್ ಕ್ಲಬ್ ಈ ಸಲದ ಮಕ್ಕಳ ದಿನಾಚರಣೆಯಂದು (ನ. ೧೪) ಮಕ್ಕಳಿಗಾಗಿ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ, ಆರೋಗ್ಯವಂತ ಮಕ್ಕಳ ಪ್ರದರ್ಶನ, ಮತ್ತು ಮಕ್ಕಳ ತಜ್ಞರಿಂದ ಪರೀಕ್ಷೆ ಮತ್ತು ಚಿಕಿತ್ಸೆ ಇವುಗಳನ್ನು ಏರ್ಪಡಿಸಿದೆ. ಅತಿ ಹೆಚ್ಚು ಜನರು ಇದರ ಪ್ರಯೋಜನ ಪಡೆಯಬೇಕೆಂದು ಡಾ॥ ಮೋಹನ ಶೆಟ್ಟಿ ಕೋರಿದ್ದಾರೆ.

ಅ. ೨೯ರಂದು ಕೊಪ್ಪ ತಾ॥ ರೈತ ಸಂಘದ ಸಭೆ

ಕೊಪ್ಪ: ಅಡಿಕೆ ಬೆಳೆಗಾರರ ಸಂಘದ ಆವರಣದಲ್ಲಿ ಅ.೨೯ರಂದು ಬೆಳಿಗ್ಗೆ ೧೧ ಗಂಟೆಗೆ ತಾ॥ ರೈತ ಸಂಘದ ಸಭೆ ಕರೆಯಲಾಗಿದೆ. ಬರುವ ಲೋಕಸಭಾ ಚುನಾವಣೆಯಲ್ಲಿ 'ಮತದಾರರ ಅಭ್ಯರ್ಥಿ'ಯನ್ನು ನಿಲ್ಲಿಸುವ ಬಗ್ಗೆ ಚರ್ಚೆ ನಡೆಸುವುದು ಸಭೆಯ ಮುಖ್ಯ ಕಾರ್ಯಕ್ರಮವಾಗಿದ್ದು, ಇನ್ನಿತರ ವಿಷಯಗಳನ್ನು ಚರ್ಚಿಸಲಾಗುವುದು. ತಾಲ್ಲೂಕಿನ ಎಲ್ಲಾ ಕಡೆಯಿಂದ ರೈತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕಾರ್ಯದರ್ಶಿ ಯಡೂರು ಸುರೇಂದ್ರ ಕರೆ ಕೊಟ್ಟಿದ್ದಾರೆ.

ಕನ್ನಡ ರಾಜ್ಯೋತ್ಸವ ಕ್ರೀಡಾ ಸ್ಪರ್ಧೆಗಳು

ಕೊಪ್ಪ: ಕನ್ನಡ ರಾಜ್ಯೋತ್ಸವದ ಅಂಗವಾಗಿ ಇಲ್ಲಿನ ಕನ್ನಡ ರಾಜ್ಯೋತ್ಸವ ಸಮಿತಿಯ ಆಶ್ರಯದಲ್ಲಿ ನವೆಂಬರ್ ೧ರಂದು ಬೆಳಿಗ್ಗೆ ೯ ಗಂಟೆಗೆ ಕಿರಿಯ ಕಾಲೇಜು ಮೈದಾನದಲ್ಲಿ ಪುರುಷರಿಗೆ ಬಾಲ್ ಬ್ಯಾಡ್ಮಿಂಟನ್ ಮತ್ತು ಮಹಿಳೆಯರಿಗೆ ತ್ರೋಬಾಲ್ ಪಂದ್ಯಗಳನ್ನು ಏರ್ಪಡಿಸಿದೆ. ತಾಲ್ಲೂಕಿನ ಎಲ್ಲಾ ತಂಡಗಳೂ ಭಾಗವಹಿಸಬಹುದು. ಪ್ರವೇಶಪತ್ರಗಳನ್ನು ೩೦-೧೦-೮೪ರೊಳಗೆ ಹೆಚ್.ಎ. ಗೋಪಾಲ್, ದೈಹಿಕ ಶಿಕ್ಷಕರು, ಕಿರಿಯ ಕಾಲೇಜು, ಕೊಪ್ಪ—ಈ ವಿಳಾಸಕ್ಕೆ ತಲುಪಿಸಬೇಕು.

ಸಂಘಟನೆಯ ಬೆಲೆ

ನಮ್ಮ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ (೧೪-೧೦-೮೪) ಅನಾವೃಷ್ಟಿಯಿಂದ ಅಡಿಕೆ ಬೆಳೆಗೆ ಹಾನಿಯಾದ ನಮ್ಮ ಮಲೆನಾಡು, ದಕ್ಷಿಣಕನ್ನಡ ಹಾಗೂ ಕೇರಳದಲ್ಲಿರುವ ಕಾಸರಗೋಡು ತಾಲ್ಲೂಕಿನ ಕೆಲ ಪ್ರದೇಶಗಳು—ಈ ಮೂರು ಕಡೆಗಳಲ್ಲಿ ಅಲ್ಲಲ್ಲಿನ ಬೆಳೆಗಾರರು ತೆಗೆದುಕೊಂಡ ಕ್ರಮಗಳು ಮತ್ತು ಪಡೆದ ಫಲಿತಾಂಶ–ಇವುಗಳನ್ನು ತುಲನೆ ಮಾಡುವಂಥ ಒಂದು ವರದಿ ಪ್ರಕಟಿಸಿತ್ತಷ್ಟೆ.

ಕೇರಳದಲ್ಲಿ ಸರ್ಕಾರವೇ ಒಂದು ಆಯೋಗ ನೇಮಿಸಿ, ಅದರಿಂದ ಶಿಫಾರ್ಸುಗಳನ್ನು ಪಡೆದಿದೆ. ಸದ್ಯದಲ್ಲೇ ರೈತರಿಗೆ ಹಲವಾರು ಬಗೆಯ ಸೌಲಭ್ಯಗಳು ಸಿಗಲಿವೆ. ಇದು ೧೯೮೩-೮೪ರ ಬೇಸಿಗೆಯಲ್ಲಾದ ನಷ್ಟಕ್ಕೆ.

ದ.ಕನ್ನಡದ ಪುಣಚಾ ಗ್ರಾಮದ ರೈತರ ನೆರವಿಗೆ ಸರ್ಕಾರವೇನೂ ಧಾವಿಸಿ ಬರಲಿಲ್ಲ. ಆದರೆ ರೈತರೇ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘ ಮತ್ತು ದ.ಕ. ಡಿ.ಸಿ.ಸಿ. ಬ್ಯಾಂಕ್ ಮೂಲಕ ತಮ್ಮ ಧ್ವನಿ ಎತ್ತಿದರು ಹಾಗೂ ಶಾಸಕರ ಮೇಲೂ ಒತ್ತಡ ಹೇರಿದರು. ಇದರ ಫಲವಾಗಿ, 'ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕ್'ನ (ನಬಾರ್ಡ್) ಐರಾವತಗಳು ದೆಹಲಿಯ ಇಂದ್ರಲೋಕದಿಂದ ಪುಣಚಾದ ತೋಟಗಳಿಗೆ ಇಳಿದು ಬಂದು ಪರಿಶೀಲಿಸಿದವು. ದ.ಕ. ಜಿಲ್ಲೆಯ ೮ ತಾ॥ಗಳ ರೈತರ ನೋವಿಗೆ ಉಪಶಮನ ಸಿಕ್ಕಿತು. ಇದು ೧೯೮೨-೮೩ರ ಬೇಸಿಗೆಯಲ್ಲಾದ ನಷ್ಟಕ್ಕೆ.

ಕೇರಳ ಸಂಘಟನೆಯ ನೆಲ. ಅಲ್ಲಿನ ಜನರಿಗೆ ಸಂಘಟನೆಯ ಬೆಲೆ ಗೊತ್ತಿದೆ. ಆ ಸಂಘಟನೆ ಕಟ್ಟಲು, ಉಳಿಸಿಕೊಳ್ಳಲು ತಮ್ಮ ತಮ್ಮ ಪಾಲಿನ ತ್ಯಾಗವನ್ನೂ ಮಾಡುತ್ತಾರೆ, ಆ ಬಲದಿಂದ ಪ್ರಯೋಜನವನ್ನೂ ಪಡೆಯುತ್ತಾರೆ. ಅಲ್ಲಿನ ಸರ್ಕಾರಗಳಿಗೂ ಇಂಥ ಬಲದ ಅರಿವಿರುತ್ತದೆ. ಆದ್ದರಿಂದಲೇ ಬೇಗ ಕರೆಗೆ ಓಗೊಡುತ್ತವೆ.

ದ.ಕ.ದಲ್ಲೂ ಸಂಘಟನಾ ಪ್ರಜ್ಞೆಗೆ ಕೊರತೆಯಿಲ್ಲ. ಜೊತೆಗೆ ಅಲ್ಲಿನವರು ತಮ್ಮ ಎಲ್ಲಾ ಪ್ರಯತ್ನಗಳನ್ನೂ ಹಾಕಿದರು ಹಾಗೂ ಅದನ್ನು ತೊಡಗಿಸಲು ಅತ್ಯುತ್ತಮ ರೀತಿ ಯಾವುದೆಂದು ನಾಲ್ಕು ಕಡೆಯೂ ನೋಡಿ, ಯೋಚಿಸಿ, ತಮ್ಮ ಪ್ರಯತ್ನ ಪರಿಣಾಮಕಾರಿಯಾಗುವಂತೆ ನೋಡಿಕೊಂಡರು.

ಇದೇ ೧೯೮೨-೮೩ರಲ್ಲಿ ನಮ್ಮ ರೈತರು ಏನು ಮಾಡಿದರು?

ಕಣ್ಣು ಕಣ್ಣು ಬಿಟ್ಟರು, ಯಾರದೋ ಕೈ ಕಾಲು ಕಟ್ಟಿದರು. ಪ್ರತಿಫಲ? ಅದಕ್ಕೆ ತಕ್ಕಷ್ಟೇ — ಕೋಲು ಗಣೆ, ಕಾರಣ?

(೨ನೇ ಪುಟಕ್ಕೆ)

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ನೇ ವರ್ಷ ೯ನೇ ಸಂಚಿಕೆ ಕೊಪ್ಪ ೨೧-೧೦-೧೯೮೪ ಭಾನುವಾರ ಬೆಲೆ ೨೦ ಪೈಸೆ

ಗೋವೆಗೆ ಜನರನ್ನು 'ಮಾರಿದ' ಆರೋಪಿಗಳ ಬಂಧನ

ಕೊಪ್ಪ: ಒಂದು ವಾರದಿಂದ ಇಲ್ಲಿ ಹಾಗೂ ಸುತ್ತ ಮುತ್ತ ಆತಂಕ ಮಿಶ್ರಿತ ಕುತೂಹಲ ಹಬ್ಬಿಸಿದ್ದ, ಗೋವಕ್ಕೆ ಮನುಷ್ಯರನ್ನು ಮಾರಿರುವುದಾಗಿ ಹೇಳಲಾಗಿದ್ದ ಪ್ರಕರಣ ಒಂದು ರೀತಿಯಲ್ಲಿ ಕೊನೆಗೊಂಡಿದೆ.

ಗೋವಕ್ಕೆ ತೆರಳಿದ್ದ ಸಬ್ ಇನ್ಸ್‌ಪೆಕ್ಟರ್ ಶಶಿಕುಮಾರ್ ಮತ್ತು ತಂಡ ಇನ್ನೂ ೬ ಮಂದಿಯನ್ನು ಹಿಂದಕ್ಕೆ ಕರೆತಂದಿದ್ದು, ಖಾದರ್, ಹಂಜಾ ಮತ್ತು ಗಂಗಾಧರ್ ಎಂಬವರನ್ನು ಬಂಧಿಸಿ ನ.ರಾ.ಪುರ ನ್ಯಾಯಾಲಯದಲ್ಲಿ ಹಾಜರ್ಪಡಿಸಿದ್ದಾರೆ. ಖಾದರನ ಕಾರನ್ನು (ಕೆಆರ್‌ಸಿ ೫೧೪) ವಶಪಡಿಸಿಕೊಳ್ಳಲಾಗಿದೆ.

ಹಿನ್ನೆಲೆ

ರಾಯಪ್ಪ ಎಂಬ ವ್ಯಕ್ತಿ ಪೋಲೀಸರಿಗೆ ನೀಡಿದ ದೂರಿನಲ್ಲಿ. ಕೊಪ್ಪ ಮತ್ತು ಸುತ್ತಮುತ್ತಲಿಂದ ಕೊಪ್ಪದ ಖಾದರ್ ಎಂಬ ವ್ಯಕ್ತಿ ೫೭ ಮಂದಿ ಕೆಲಸದಾಳುಗಳನ್ನು ಗೋವಾದ ಯೋಜನಾ ಪ್ರದೇಶವೊಂದಕ್ಕೆ ಒಯ್ದು ತಲಾ ೨ ಸಾವಿರ ರೂ.ನಂತೆ ಮಾರಿದ್ದಾನೆ. ಅಲ್ಲಿ ಬೆಳಗಿನ ೫ ಗಂಟೆಯಿಂದ ರಾತ್ರಿ ೭ರ ತನಕ ಚಾಟಿ, ಚೂರಿ ಹಿಡಿದುಕೊಂಡು ದುಡಿಸಲಾಗುತ್ತಿದೆ. ಡ್ರಂನಲ್ಲಿ ಗಂಜಿ ಕಾಯಿಸಿ ಹಾಕುತ್ತಾರೆ. ಸಂಬಳವಿಲ್ಲ. ತಪ್ಪಿಸಿಕೊಳ್ಳದಂತೆ ಕಾವಲಿರುತ್ತಾರೆ. ನಾವು ೬ ಮಂದಿ ಹೇಗೋ ಕಾಡಿಗೆ ಬಿದ್ದು ತಪ್ಪಿಸಿಕೊಂಡು ನಡೆಯುತ್ತಲೇ ಬಂದೆವು. ಇನ್ನುಳಿದವರು ಅಲ್ಲೇ ಇದ್ದಾರೆ.... ಮುಂತಾಗಿ ದೂರಲಾಗಿತ್ತು. ಅವರೆಲ್ಲರ ಕಾಲುಗಳು ಬಾತುಹೋಗಿದ್ದವು.

ವಿಷಯ ಊರಲ್ಲಿ ಗುಲ್ಲಾಗಿ, ಗಣ್ಯರ ಒತ್ತಾಯವೂ ಬಂದು, ಪೋಲೀಸರು ಕೂಡಲೇ ಖಾದರನ ಕಾರನ್ನು ವಶಪಡಿಸಿಕೊಂಡರು. ಅವನನ್ನು ಕರೆದುಕೊಂಡು ಸ|| ಇ|| ಶಶಿಕುಮಾರ್ ಮತ್ತು ತಂಡ ಗೋವಾಕ್ಕೆ ತೆರಳಿತು.

ಪೊರಿಯಾ, ಸತ್ತಡ ಮತ್ತು ಕಣ್ಕಾಣಿಗಳಲ್ಲಿ ಹೆದ್ದಾರಿ ಕೆಲಸಗಳಲ್ಲಿ ತೊಡಗಿದ್ದ ಕೂಲಿಯಾಳುಗಳನ್ನು ಕಂಡು, ಅವರ ಪರಿಸ್ಥಿತಿಯನ್ನು ಪರಿಶೀಲಿಸಿ, ಅವರೆಲ್ಲ ಊರಿಗೆ ಮರಳಬಹುದೆಂದೂ, ಯಾರಿಂದಲೂ ಏನೂ ಅಪಾಯುವಾಗದಂತೆ ರಕ್ಷಣೆ ನೀಡುವುದಾಗಿಯೂ ಶಶಿಕುಮಾರ್ ತಿಳಿಸಿದಾಗ ೫ ಜನ ಮಾತ್ರ (ಮತ್ತು ಅವರ ಒಂದು ಮಗು) ಬರಲು ಒಪ್ಪಿದರು. ಇನ್ನೂ ೨೦-೨೫ ಜನ ತಾವು ಅಲ್ಲೇ ಉಳಿಯುವುದಾಗಿ ಹೇಳಿದರು. ಸುಮಾರು ೨೦ ಜನ ಅಲ್ಲಿಂದ ಆಗಲೇ ತಪ್ಪಿಸಿಕೊಂಡು ಎಲ್ಲೋ ಹೋಗಿರುವುದಾಗಿ ತಿಳಿದುಬಂತು.

ಬಂಧನ

ಸ|| ಇ|| ಶಶಿಕುಮಾರ್ ಅವರ ಪರಿಶೀಲನೆಯಿಂದ ತಿಳಿದು ಬಂದಂತೆ, ಬೆಳಗಿನ ಜಾವ ಕಟ್ಟಾ ಚಹ, ೧೦ ಗಂಟೆಗೆ ಗಂಜಿ, ಮಧ್ಯಾಹ್ನ ಮತ್ತು ರಾತ್ರಿ ಊಟ, ಸಂಜೆ ಕಟ್ಟಾ ಚಹಾ—ಇಷ್ಟು 'ಆಹಾರ' ಕೊಡಲಾಗುತ್ತಿತ್ತು. ಗಂಜಿಯನ್ನು ದೊಡ್ಡ ಅಲ್ಯುಮಿನಿಯಂ ಚರಿಗೆಗಳಲ್ಲಿ ಬೇಯಿಸುತ್ತಿದ್ದರು. ಡ್ರಂಗಳಲ್ಲಲ್ಲ. ಅವರನ್ನು ಮಾರಾಟ ಮಾಡಿದ್ದಲ್ಲವೆಂದೂ, ಅವರಿಗೇ ಮುಂಗಡಕೊಟ್ಟು ಗಂಡಾಳಿಗೆ ದಿನಗೂಲಿ ೧೫ ರೂ.....ಮುಂತಾಗಿ ಸಂಬಳ ಕೊಟ್ಟು ಇಟ್ಟುಕೊಂಡಿದ್ದು ಅವರಿಂದಲೇ ೫ ಸಾವಿರ ರೂ. ತಮಗೆ ಬಾಕಿ ಇರುವುದಾಗಿಯೂ, ಅಲ್ಲಿ ಕಂಟ್ರಾಕ್ಟ್ ಮಾಡಿಸುತ್ತಿರುವ ಹಂಜಾ ಮತ್ತು ಖಾದರ್ ಸೋದರರೆಂದೂ ಅವರುಗಳು ಹೇಳಿಕೊಂಡರು.

ಅಂತೂ ಅವರನ್ನೆಲ್ಲ ಬಂಧಿಸಿ, ಬುಚೋಲಿಂ ನ್ಯಾಯಾಲಯದಲ್ಲಿ ಹಾಜರ್ಪಡಿಸಿ, ಊರಿಗೆ ಕರೆತರಲಾಯಿತು. ಮುಂದಿನ ಕ್ರಮ ಜರುಗಿಸಲಾಗುತ್ತಿದೆ.

ಕಳ್ಳರ ಸೆರೆ; ವಸ್ತು ವಶ

ಕೊಪ್ಪ: ಇಲ್ಲಿನ ಪೋಲೀಸರು ಅ. ೩ರಂದು ಪಚ್ಚಮುತ್ತು, ನಾಗರಾಜ, ನಾರಾಯಣ, ಇಕ್ಬಾಲ್, ಖಾದರ್ (ಎಲ್ಲ ಕೂಲೀಯರು) ಎಂಬವರನ್ನು ಬಂಧಿಸಿ, ಅವರಿಂದ ಸುಮಾರು ೪ ಸಾವಿರ ರೂ. ಕಳವಿನ ಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ. ಪಚ್ಚಮುತ್ತು ನಾಗರಾಜ ಉತ್ತಮೇಶ್ವರ, ಬಸವೆ ಸ|| ಸಂಘಗಳಲ್ಲೂ ಹಲವು ಅಂಗಡಿಗಳಲ್ಲೂ ಕಳವು ಮಾಡುತ್ತಿದ್ದರೆನ್ನಲಾಗಿದೆ.

ಕೊಪ್ಪದ ಲಯನ್ಸ್ ಕ್ಲಬ್ ಆಶ್ರಯದಲ್ಲಿ

ಲ|| ಡಾ|| ನಂಜುಂಡ ರಾವ್ ಅವರಿಂದ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರ

ಕೊಪ್ಪ: ಮದ್ರಾಸಿನ ಸುಪ್ರಸಿದ್ಧ ಸರ್ಜನರೂ ಪ್ರೊಫೆಸರರೂ ಆಗಿದ್ದು ಈಗ ನಿವೃತ್ತರಾಗಿ ತಮ್ಮ ಪೂರ್ಣಾವಧಿಯನ್ನು ಲಯನ್ಸ್ ಸಂಸ್ಥೆಯ ಮೂಲಕ ಸೇವೆಗಾಗಿಯೇ ಮೀಸಲಿಟ್ಟಿರುವ ಲ|| ಡಾ|| ಆರ್. ನಂಜುಂಡ ರಾವ್ ಅವರು ತಮ್ಮ ಸಹಾಯಕರೊಂದಿಗೆ ಪ್ರತೀ ಮೂರು ತಿಂಗಳಿಗೊಮ್ಮೆ ಶೃಂಗೇರಿಯ ಧನ್ವಂತರಿ ಆಸ್ಪತ್ರೆಗೆ ಭೇಟಿ ಕೊಟ್ಟು ಶಸ್ತ್ರಚಿಕಿತ್ಸೆ ಅಗತ್ಯವಾಗಿರುವ ಸುತ್ತಮುತ್ತಲ ರೋಗಿಗಳಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ನಡೆಸುವರು.

ಈ ವಿಷಯ 'ಮುಂಜಾವು'ಗೆ ತಿಳಿಸಿದ ಕೊಪ್ಪ ಲಯನ್ಸ್ ಕ್ಲಬ್ ಅಧ್ಯಕ್ಷ ಡಾ|| ಮೋಹನ ಶೆಟ್ಟಿ. ಈ ಶಿಬಿರಕ್ಕೆ ಸುತ್ತಮುತ್ತಲ ಖಾಸಗಿ ವೈದ್ಯರುಗಳೂ ರೋಗಿಗಳನ್ನು ರೆಫರ್ ಮಾಡಬಹುದಾಗಿರುತ್ತದೆ. ಶಸ್ತ್ರಚಿಕಿತ್ಸೆ ಅಗತ್ಯವೆಂದು ವೈದ್ಯರಿಂದ ತಿಳಿಸಲ್ಪಟ್ಟಿರುವ ರೋಗಿಗಳೂ ಸಹ ಇದರ ಪ್ರಯೋಜನ ಪಡೆಯಬಹುದು. ಅಗತ್ಯವಿರುವವರು ಕೊಪ್ಪ ಲಯನ್ಸ್ ಕ್ಲಬ್ಬಿನ ಪದಾಧಿಕಾರಿಗಳನ್ನು ಸಂಪರ್ಕಿಸಿದಲ್ಲಿ ಅಗತ್ಯ ಮಾರ್ಗದರ್ಶನಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಶಸ್ತ್ರಚಿಕಿತ್ಸೆ ಶಿಬಿರ ಬರುವ ಡಿಸೆಂಬರಿನಲ್ಲಿ ನಡೆಯುವ ನಿರೀಕ್ಷೆಯಿದ್ದು, ಖಚಿತವಾದ ದಿನವನ್ನು ಮುಂದೆ ತಿಳಿಸುವುದಾಗಿ ಅವರು ಹೇಳಿದರು.

ಮಕ್ಕಳ ದಿನಾಚರಣೆಯಂದು

ಲಯನ್ಸ್ ಕ್ಲಬ್ ಈ ಸಲದ ಮಕ್ಕಳ ದಿನಾಚರಣೆಯಂದು (ನ. ೧೪) ಮಕ್ಕಳಿಗಾಗಿ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ, ಆರೋಗ್ಯವಂತ ಮಕ್ಕಳ ಪ್ರದರ್ಶನ, ಮತ್ತು ಮಕ್ಕಳ ತಜ್ಞರಿಂದ ಪರೀಕ್ಷೆ ಮತ್ತು ಚಿಕಿತ್ಸೆ ಇವುಗಳನ್ನು ಏರ್ಪಡಿಸಿದೆ. ಅತಿ ಹೆಚ್ಚು ಜನರು ಇದರ ಪ್ರಯೋಜನ ಪಡೆಯಬೇಕೆಂದು ಡಾ|| ಮೋಹನ ಶೆಟ್ಟಿ ಕೋರಿದ್ದಾರೆ.

ಅ. ೨೯ರಂದು ಕೊಪ್ಪ ತಾ|| ರೈತ ಸಂಘದ ಸಭೆ

ಕೊಪ್ಪ: ಅಡಿಕೆ ಬೆಳೆಗಾರರ ಸಂಘದ ಆವರಣದಲ್ಲಿ ಅ.೨೯ರಂದು ಬೆಳಿಗ್ಗೆ ೧೧ ಗಂಟೆಗೆ ತಾ|| ರೈತ ಸಂಘದ ಸಭೆ ಕರೆಯಲಾಗಿದೆ. ಬರುವ ಲೋಕಸಭಾ ಚುನಾವಣೆಯಲ್ಲಿ 'ಮತದಾರರ ಅಭ್ಯರ್ಥಿ'ಯನ್ನು ನಿಲ್ಲಿಸುವ ಬಗ್ಗೆ ಚರ್ಚೆ ನಡೆಸುವುದು ಸಭೆಯ ಮುಖ್ಯ ಕಾರ್ಯಕ್ರಮವಾಗಿದ್ದು, ಇನ್ನಿತರ ವಿಷಯಗಳನ್ನು ಚರ್ಚಿಸಲಾಗುವುದು. ತಾಲ್ಲೂಕಿನ ಎಲ್ಲಾ ಕಡೆಯಿಂದ ರೈತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕಾರ್ಯದರ್ಶಿ ಯಡೂರು ಸುರೇಂದ್ರ ಕರೆ ಕೊಟ್ಟಿದ್ದಾರೆ.

ಕನ್ನಡ ರಾಜ್ಯೋತ್ಸವ ಕ್ರೀಡಾ ಸ್ಪರ್ಧೆಗಳು

ಕೊಪ್ಪ: ಕನ್ನಡ ರಾಜ್ಯೋತ್ಸವದ ಅಂಗವಾಗಿ ಇಲ್ಲಿನ ಕನ್ನಡ ರಾಜ್ಯೋತ್ಸವ ಸಮಿತಿಯ ಆಶ್ರಯದಲ್ಲಿ ನವೆಂಬರ್ ೧ರಂದು ಬೆಳಿಗ್ಗೆ ೯ ಗಂಟೆಗೆ ಕಿರಿಯ ಕಾಲೇಜು ಮೈದಾನದಲ್ಲಿ ಪುರುಷರಿಗೆ ಬಾಲ್ ಬ್ಯಾಡ್‌ಮಿಂಟನ್ ಮತ್ತು ಮಹಿಳೆಯರಿಗೆ ತ್ರೋಬಾಲ್ ಪಂದ್ಯಗಳನ್ನು ಏರ್ಪಡಿಸಿದೆ. ತಾಲ್ಲೂಕಿನ ಎಲ್ಲಾ ತಂಡಗಳೂ ಭಾಗವಹಿಸಬಹುದು. ಪ್ರವೇಶಪತ್ರಗಳನ್ನು ೩೦-೧೦-೮೪ರೊಳಗೆ ಹೆಚ್.ಎ. ಗೋಪಾಲ್, ದೈಹಿಕ ಶಿಕ್ಷಕರು, ಕಿರಿಯ ಕಾಲೇಜು, ಕೊಪ್ಪ—ಈ ವಿಳಾಸಕ್ಕೆ ತಲುಪಿಸಬೇಕು.

ಸಂಘಟನೆಯ ಬೆಲೆ

ನಮ್ಮ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ (೧೪-೧೦-೮೪) ಅನಾವೃಷ್ಟಿಯಿಂದ ಅಡಿಕೆ ಬೆಳೆಗೆ ಹಾನಿಯಾದ ನಮ್ಮ ಮಲೆನಾಡು, ದಕ್ಷಿಣಕನ್ನಡ ಹಾಗೂ ಕೇರಳದಲ್ಲಿರುವ ಕಾಸರಗೋಡು ತಾಲ್ಲೂಕಿನ ಕೆಲ ಪ್ರದೇಶಗಳು—ಈ ಮೂರು ಕಡೆಗಳಲ್ಲಿ ಅಲ್ಲಲ್ಲಿನ ಬೆಳೆಗಾರರು ತೆಗೆದುಕೊಂಡ ಕ್ರಮಗಳು ಮತ್ತು ಪಡೆದ ಫಲಿತಾಂಶ–ಇವುಗಳನ್ನು ತುಲನೆ ಮಾಡುವಂಥ ಒಂದು ವರದಿ ಪ್ರಕಟಿಸಿತ್ತಷ್ಟೆ.

ಕೇರಳದಲ್ಲಿ ಸರ್ಕಾರವೇ ಒಂದು ಆಯೋಗ ನೇಮಿಸಿ, ಅದರಿಂದ ಶಿಫಾರ್ಸುಗಳನ್ನು ಪಡೆದಿದೆ. ಸದ್ಯದಲ್ಲೇ ರೈತರಿಗೆ ಹಲವಾರು ಬಗೆಯ ಸೌಲಭ್ಯಗಳು ಸಿಗಲಿವೆ. ಇದು ೧೯೮೩-೮೪ರ ಬೇಸಿಗೆಯಲ್ಲಾದ ನಷ್ಟಕ್ಕೆ.

ದ.ಕನ್ನಡದ ಪುಣಚಾ ಗ್ರಾಮದ ರೈತರ ನೆರವಿಗೆ ಸರ್ಕಾರವೇನೂ ಧಾವಿಸಿ ಬರಲಿಲ್ಲ. ಆದರೆ ರೈತರೇ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘ ಮತ್ತು ದ.ಕ. ಡಿ.ಸಿ.ಸಿ. ಬ್ಯಾಂಕ್ ಮೂಲಕ ತಮ್ಮ ಧ್ವನಿ ಎತ್ತಿದರು ಹಾಗೂ ಶಾಸಕರ ಮೇಲೂ ಒತ್ತಡ ಹೇರಿದರು. ಇದರ ಫಲವಾಗಿ, 'ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕ್'ನ (ನಬಾರ್ಡ್) ಐರಾವತಗಳು ದೆಹಲಿಯ ಇಂದ್ರಲೋಕದಿಂದ ಪುಣಚಾದ ತೋಟಗಳಿಗೆ ಇಳಿದು ಬಂದು ಪರಿಶೀಲಿಸಿದವು. ದ.ಕ. ಜಿಲ್ಲೆಯ ೮ ತಾ|| ಗಳ ರೈತರ ನೋವಿಗ್ಗೆ ಉಪಶಮನ ಸಿಕ್ಕಿತು. ಇದು ೧೯೮೨-೮೩ರ ಬೇಸಿಗೆಯಲ್ಲಾದ ನಷ್ಟಕ್ಕೆ.

ಕೇರಳ ಸಂಘಟನೆಯ ನೆಲ. ಅಲ್ಲಿನ ಜನರಿಗೆ ಸಂಘಟನೆಯ ಬೆಲೆ ಗೊತ್ತಿದೆ. ಆ ಸಂಘಟನೆ ಕಟ್ಟಲು, ಉಳಿಸಿಕೊಳ್ಳಲು ತಮ್ಮ ತಮ್ಮ ಪಾಲಿನ ತ್ಯಾಗವನ್ನೂ ಮಾಡುತ್ತಾರೆ, ಆ ಬಲದಿಂದ ಪ್ರಯೋಜನವನ್ನೂ ಪಡೆಯುತ್ತಾರೆ. ಅಲ್ಲಿನ ಸರ್ಕಾರಗಳಿಗೂ ಇಂಥ ಬಲದ ಅರಿವಿರುತ್ತದೆ. ಆದ್ದರಿಂದಲೇ ಬೇಗ ಕರೆಗೆ ಓಗೊಡುತ್ತವೆ.

ದ.ಕ.ದಲ್ಲೂ ಸಂಘಟನಾ ಪ್ರಜ್ಞೆಗೆ ಕೊರತೆಯಿಲ್ಲ. ಜೊತೆಗೆ ಅಲ್ಲಿನವರು ತಮ್ಮ ಎಲ್ಲಾ ಪ್ರಯತ್ನಗಳನ್ನೂ ಹಾಕಿದರು ಹಾಗೂ ಅದನ್ನು ತೊಡಗಿಸಲು ಅತ್ಯುತ್ತಮ ರೀತಿ ಯಾವುದೆಂದು ನಾಲ್ಕು ಕಡೆಯೂ ನೋಡಿ, ಯೋಚಿಸಿ, ತಮ್ಮ ಪ್ರಯತ್ನ ಪರಿಣಾಮಕಾರಿಯಾಗುವಂತೆ ನೋಡಿಕೊಂಡರು.

ಇದೇ ೧೯೮೩-೮೪ರಲ್ಲಿ ನಮ್ಮ ರೈತರು ಏನು ಮಾಡಿದರು?

ಕಣ್ಣು ಕಣ್ಣು ಬಿಟ್ಟರು, ಯಾರದೋ ಕೈ ಕಾಲು ಕಟ್ಟಿದರು. ಪ್ರತಿಫಲ? ಅದಕ್ಕೆ ತಕ್ಕಷ್ಟೇ — ಕೋಲು ಗರಟೆ. ಕಾರಣ?

(೨ನೇ ಪುಟಕ್ಕೆ)

ಓದುಗರ ಪತ್ರಗಳು

“ಭದ್ರಾ ಮೇಲ್ದಂಡೆ ಯೋಜನೆ ನಾವೆಲ್ಲ ಒಟ್ಟಾಗಿ ವಿರೋಧಿಸಲೇಬೇಕು”

ಮಾನ್ಯರೆ,

ಭದ್ರಾ ಮೇಲ್ದಂಡೆ ಯೋಜನೆಯನ್ನು ವಿರೋಧಿಸಬೇಕೆಂದು ನೀವು ಪ್ರಕಟಿಸಿರುವ ಕರೆ ಅತ್ಯಂತ ವಿವೇಚನಾಯುತವೂ, ಸಕಾಲಿಕವೂ ಆಗಿದ್ದು, ಕೋಳಿ ಜಗಳವನ್ನೇ ದೊಡ್ಡದು ಮಾಡುತ್ತ ಕಾಲ ಕಳೆಯುವ ಮಲೆನಾಡಿನ ಹಲವು ಪತ್ರಿಕೆಗಳ ಕಣ್ಣು ತೆರೆಸುವಂಥದ್ದೂ ಆಗಿದೆ.

ನಾವೀಗ ಒಟ್ಟಾಗಿ ಹೋರಾಡಬೇಕಾಗಿದೆ ಮತ್ತು ಖಂಡಿತವಾಗಿ ಅಂಥ ಹೋರಾಟ ನಿಷ್ಫಲವಾಗುವುದಿಲ್ಲ. ಕೇರಳದಲ್ಲಿ ‘ಮೌನ ಕಣಿವೆ’ ಯೋಜನೆಯ ವಿರುದ್ಧ ಹೋರಾಡಿ ಪರಿಸರ ಪ್ರೇಮಿಗಳು ಗೆದ್ದಿದ್ದಾರೆ; ನಮ್ಮಲ್ಲೇ ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ಯೋಜನೆಯ ವಿರುದ್ಧ ಹೋರಾಡಿ ಅಲ್ಲಿನ ಜನ ಗೆದ್ದಿದ್ದಾರೆ (ಸದ್ಯಕ್ಕಾದರೂ.)

‘ಮಾರಿ ಕಣ್ಣು ಹೋತನ ಮೇಲೆ’ ಎಂಬಂತೆ ಈಗ ಕೆಲವು ರಾಜಕಾರಣಿಗಳ, ಅರಣ್ಯ ಇಲಾಖೆಯ ಅಧಿಕಾರಿಗಳ ಮತ್ತು ಟಿಂಬರ್ ಕಂಟ್ರಾಕ್ಟರುಗಳ ಕಣ್ಣು ಬಾಳೆಹೊನ್ನೂರು ಆಸುಪಾಸಿನ ಕಾಡಿನ ಮೇಲೆ ಬಿದ್ದಿರುವಂತಿದೆ. ಆದರೆ, ಇದನ್ನು ಕಡಿಯುವ ಮುನ್ನ, ಈಗಾಗಲೇ ಕಡಿದಿರುವ ಕಾಡುಗಳಿಂದ ಆದ ನಷ್ಟ, ಆದರಿಂದ ಮಾಡಿದ ಯೋಜನೆಗಳಿಂದಾದ ಲಾಭ ಈ ಬಗ್ಗೆ ಸಂಬಂಧಪಟ್ಟವರು ಮೊದಲು ಲೆಕ್ಕ ಕೊಡಲಿ! ಲೆಕ್ಕದ ಮಾತು ಹಾಗಿರಲಿ. ಯಾವ ಕಾರಣಕ್ಕೂ ದಟ್ಟವಾದ ಈ ಅರಣ್ಯ, ಅಲ್ಲಿನ ವನ್ಯ ಮೃಗಗಳು, ರೂಢಿಸಿದ ಸಾವಿರಾರು ಎಕರೆ ಕಾಫಿ, ಏಲಕ್ಕಿ, ಅಡಿಕೆ, ತೆಂಗಿನ ತೋಟಗಳು ಇವನ್ನು ನಾವು – ಮಲೆನಾಡಿನವರು–ಬಲಿ ಕೊಡಬಾರದು. ಯಾರ ಎಂಥ ಲೆಕ್ಕಾಚಾರಕ್ಕೂ, ಬಣ್ಣದ ಮಾತಿಗೂ, ಪಕ್ಷ ಪ್ರೇಮಕ್ಕೂ ನಾವು ಮೋಸ ಹೋಗಬಾರದು.

ಪ್ರಕೃತಿಯನ್ನು ಹೀಗೆ ಕೊಲ್ಲುವುದು ಮಾತೃಹಂತಕ ಬುದ್ಧಿ. ಕೊಲ್ಲಬೇಕೆನ್ನುವವರಿಗೆ ನಾವು ವಿವೇಕ ಹೇಳೋಣ. ಕೇಳದಿದ್ದರೆ ಗಾಂಧೀ ಮಾರ್ಗವನ್ನು ಕಟ್ಟುನಿಟ್ಟಾಗಿ ಅನುಸರಿಸೋಣ. ಅವಶ್ಯಕತೆ ಬಂದರೆ ಈ ವಿಷಯದಲ್ಲಿ–ಆ ಪದದ ನಿಜವಾದ ಅರ್ಥದಲ್ಲಿ–ಜೀವದ ಹಂಗು ತೊರೆದು ಹೋರಾಡೋಣ. ನಾವು ಮಾಡುತ್ತಿರುವುದು ಮಾನವ ಪೀಳಿಗೆಗೆ – ನಮಗೇ – ಅತ್ಯಂತ ಕಲ್ಯಾಣಕಾರಕವಾದ ಮಹತ್ಕಾರ್ಯ ಎಂದು ನೆನಪಿಟ್ಟುಕೊಳ್ಳೋಣ. ನಮಗೆ ಜಯ ಶತಸ್ಸಿದ್ಧ.

—ಎಚ್. ಸುಂದರ ರಾವ್,
ಬಿ.ಸಿ. ರೋಡು, ದ.ಕ.

ಟ್ರೈಸಮ್ ಯೋಜನೆ: ತರಬೇತಿ ಅಭ್ಯರ್ಥಿಗಳ ಆಯ್ಕೆಯಲ್ಲಿ ಪಕ್ಷಪಾತವೆ, ರಾಜಕೀಯವೆ?

ಮಾನ್ಯರೆ,

ಟ್ರೈಸಮ್ ಯೋಜನೆಯಲ್ಲಿ ಹೊಲಿಗೆ ತರಬೇತಿ, ರೇಡಿಯೋ ರಿಪೇರಿ, ವಾಚ್ ರಿಪೇರಿ, ಆಟೋವರ್ಕ್ಸ್ ಮುಂತಾದವುಗಳಿಗೆ ತರಬೇತಿ ಕೊಡಲು ಕೊಪ್ಪ ತಾಲ್ಲೂಕಿನಲ್ಲಿ ಸಂದರ್ಶನ ಕರೆಯಲಾಗಿತ್ತು. ಒಟ್ಟು ೪೭ ಅಭ್ಯರ್ಥಿಗಳ ಆಯ್ಕೆಯಲ್ಲಿ ಹರಿಹರಪುರ ಹೋಬಳಿಗೆ ೨೭, ಕಸಬಾ ಹೋಬಳಿಗೆ ೧೬ ಹಾಗೂ ಮೇಗುಂದಾ ಹೋಬಳಿಗೆ ೪ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಮೇಗುಂದಾ ಹೋಬಳಿಯಿಂದ, ಸಂದರ್ಶನ ಅಧಿಕಾರಿಗಳು ಮೊದಲೇ ತಿಳಿಸಿದಂತೆ ಎಲ್ಲಾ ಅರ್ಹತೆಗಳಿದ್ದ ಒಟ್ಟು ೫೨ ಜನ ಅಭ್ಯರ್ಥಿಗಳು ಸಂದರ್ಶನಕ್ಕೆ ಬಂದಿದ್ದರು. ಆದರೆ, ಕೇವಲ ೪ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು ನೋಡಿದರೆ ಇದರಲ್ಲಿ ರಾಜಕಾರಿಣಿಗಳ ಒತ್ತಡವೊ ಅಥವಾ ಅಧಿಕಾರಿಗಳ ಒತ್ತಡವೊ ತಿಳಿಯದಾಗಿದೆ.

ಸಂದರ್ಶನಕ್ಕೆ ಚಿಕ್ಕಮಗಳೂರಿನಿಂದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಬಂದಿದ್ದರು. ಆದರೆ ಅಲ್ಲಿ ಹೋಬಳಿ ಮಟ್ಟದ ಗ್ರಾಮ ಸೇವಕರುಗಳೇ ಸಂದರ್ಶನಾಧಿಕಾರಿಗಳಂತೆ ಕಂಡು ಬಂತು. “ಇವರನ್ನು ಆಯ್ಕೆ ಮಾಡಿ,.... ಇವರನ್ನು ಬೇಡ” ಎಂದು ಹೇಳುತ್ತಿದ್ದರು.

ಸಂದರ್ಶನ ಮುಗಿದ ಮೇಲೆ, ಕೈಗಾರಿಕಾ ವಿಸ್ತರಣಾಧಿಕಾರಿಗಳು ಗ್ರಾಮಸೇವಕರನ್ನೆ ಕೇಳಿ ಆಯ್ಕೆ ಪಟ್ಟಿ ಮಾಡಿದರೆಂಬ ವದಂತಿಯೂ ಇದೆ.

ಇಂತಹ ಅನ್ಯಾಯಗಳಾಗದಂತೆ ಇನ್ನು ಮುಂದಾದರೂ ಸಂದರ್ಶನ ಅಧಿಕಾರಿಗಳು ಎಚ್ಚರವಹಿಸಿ, ಎಲ್ಲಾ ಹೋಬಳಿಗಳಿಗೂ ಪ್ರಾತಿನಿಧ್ಯ ಕೊಡುವರೆಂದು ಆಶಿಸೋಣವೆ? ಈ ವಿಷಯವನ್ನು ಶೃಂಗೇರಿ ಕ್ಷೇತ್ರದ ಶಾಸಕರ ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೂ ತರಲಾಗಿದೆ.

—ನೊಂದವರು,
(೭ ಜನರ ಸಹಿ ಇದೆ)

ಶೃಂಗೇರಿ ಕ್ಷೇತ್ರದಲ್ಲಿ ಮಲ್ಲಿಕಾರ್ಜುನಯ್ಯ ಪ್ರವಾಸ

ಬಾಳೆಹೊನ್ನೂರು: ಮತದಾರರನ್ನು ಅಭಿನಂದಿಸುವುದು ಮತ್ತು ಸಾರ್ವಜನಿಕ ಕುಂದುಕೊರತೆ ಕೇಳುವುದಕ್ಕಾಗಿ ಅ. ೨೦ ಮತ್ತು ೨೧ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುವ ವಿಧಾನಪರಿಷತ್ ಸದಸ್ಯ ಎಸ್. ಮಲ್ಲಿಕಾರ್ಜುನಯ್ಯ ಅ[...] ೭.೪೫ಕ್ಕೆ ಇಲ್ಲಿ ಪದವಿ[...] ಮಾಡುವರು. ಮರುದಿನ[...] ಮತ್ತು ಕುಂದುಕೊರತೆ ವಿ[...] ಕ್ರಮಗಳು ಈ ಕೆಳಕಂಡಂ[...] ಶೋಧನಾ ಕೇಂದ್ರ (ಬೆ.[...] (೧೦ಗಂ.), ಶೃಂಗೇರಿ (೧[...] ರಡಿ (೨ ಗಂ.), ಹರಿಹರ[...] ಕೊಪ್ಪ (ಸಂ. ೪ ಗಂ.), ನ.[...] ೬ ಗಂಟೆಗೆ). ಕೊಪ್ಪದಲ್ಲಿ ಅ[...] ಕಾರ್ಯಾಲಯದ ಉದ್ಘಾಟನೆ

ಕೊಪ್ಪ[...]
ಕೊರತೆ[...]

ಕೊಪ್ಪ[...]
ಪೂರ್ವಕವ[...]
ನ್ನನುಸರಿಸಿ[...]
ರತೆಗಳನ್ನು[...]
ಗಿದೆಯೆಂದು[...]
ದಸರಾ ರ[...]
ನ್ಯಾಸಕರ ನೇ[...]
ದಾಗಿ ಶಾಸಕರು[...]
ವಿದ್ಯಾರ್ಥಿಗಳು[...]
ಕ್ರೀಡಾ ಸಾ[...]
ಒದಗಿಸಲಾಗುತ್ತ[...]
ನಲ್ಲಿ ನಡೆಯುವ[...]
ಕೂಟಕ್ಕೆ ತಂಡ[...]
ಪ್ರಿನ್ಸಿಪಾಲರು ನೀ[...]
ಆಯ್ಕೆ ಕೂಡ ಮಾ[...]
ನಂತರ ವಾಚನಾಲ[...]
ವ ಹಾಗೂ ಎನ್.ಸಿ.ಸಿ[...]
ಎಸ್.ಗಾಗಿ ಪ್ರಯತ್ನಿ[...]
ಲಾಗಿದೆ—ಎಂದೂ ವಿ[...]
ದ್ದಾರೆ.

ರಕ್ತದಾನ ಎಲ್ಲಕ್ಕಿಂತ ಶ್ರೆ[...]
ರಕ್ತ ದಾನ ಮಾಡಿ,
ಮಹಾದಾನಿಗಳೆನಿಸಿಕೆ[...]
—ಲಯನ್ಸ್ ಕ್ಲಬ್,

ಸಂಘಟನೆಯ ಬೆಲೆ

(೧ನೇ ಪುಟದಿಂದ)

ಇಲ್ಲೂ ಒಂದು ‘ಜಿಲ್ಲಾ ಅಡಿಕೆ ಬೆಳೆಗಾರರ ಸಂಘ’ ಇದೆ. ಸುಮಾರು ನಮ್ಮ ಸ್ವಾತಂತ್ರ್ಯದಷ್ಟೇ ಹಳೆಯದು. ಅದರ ಸದಸ್ಯ ಬಲ? ಮೂರೂ ಮತ್ತೊಂದು! ಅದರ ಮುಂದಾಳುಗಳು ಎಷ್ಟೇ ಹೆಣಗಿದರೂ ರೈತರಿಗೆ ಸಂಘಟಿತರಾಗುವುದು ಬೇಕಾಗಿಲ್ಲವಂತೆ. ಕಳೆದ ಸಲ ಪರಿಹಾರಕ್ಕಾಗಿ ಅರ್ಜಿಗಳನ್ನು ಸಂಘದ ಮೂಲಕ ಸಲ್ಲಿಸುವುದಕ್ಕಾಗಿ ಒಂದೋ ಎರಡೋ ರೂಪಾಯಿ ಕೊಟ್ಟು ಒಂದೂವರೆ ಸಾವಿರದಷ್ಟು ಜನ ಸದಸ್ಯರಾಗಿದ್ದರು. ಅಷ್ಟೆ. ಅಲ್ಲಿಗೆ ಮುಗಿಯಿತು. ರೈತರನ್ನು ಆಕರ್ಷಿಸುವ, ಹಿಡಿದಿಡುವ, ತೊಡಗಿಸುವ ಯಾವುದೇ ವಿಶಿಷ್ಟ ಗುರಿ, ಕಾರ್ಯಕ್ರಮಗಳು ಸಂಘಕ್ಕೂ ಇದ್ದಂತಿಲ್ಲ.

ಹೀಗಾಗಿ, ಅನಾಹುತ ಬಂದಾಗ ರೈತರು, ದ.ಕ.ದವರಂತೆ ತಾವು ಏನು ಮಾಡಬೇಕು, ಏನೇನು ಸಾಧ್ಯತೆಗಳಿವೆ – ಎಂದು ತಲೆ ಬಳಸಲಿಲ್ಲ, ಅವರಂತೆ ತಮ್ಮ ಶಕ್ತಿ, ಸಾಮರ್ಥ್ಯಗಳನ್ನು ಒಟ್ಟುಗೂಡಿಸಲಿಲ್ಲ. ಸೀದಾ ಹೋಗಿ ಸರ್ಕಾರದ ಕಾಲಿಗೆ ಬಿದ್ದರು. ಸರ್ಕಾರ ತಲೆ ನೇವರಿಸಿತು. ನಂಬಿಕೊಂಡು ಎದ್ದು ಬಂದರು. ದೆಹಲಿಯ ಐರಾವತ ಹಾಗಿರಲಿ, ಇಲ್ಲೇ ಇದ್ದ ಅಧಿಕಾರಿಗಳೂ ಇವರ ತೋಟಗಳೊಳಗೆ ಇಳಿಯಲಿಲ್ಲ. ಕೂತಲ್ಲೇ ಗುಣಾಕಾರ, ಭಾಗಾಕಾರ ಮಾಡಿ ಸೊನ್ನೆ ಬರೆದು ಕಳಿಸಿದರು. ಪ್ರಯತ್ನಕ್ಕೆ ತಕ್ಕ ಪ್ರತಿಫಲ!?

ಇದು ನಮ್ಮ ರೈತರ ಮನೋಭಾವಕ್ಕೆ ಹಿಡಿದ ಕನ್ನಡಿ.

ಈ ಮನೋಭಾವದ ಇನ್ನೊಂದೆರಡು ಲಕ್ಷಣಗಳನ್ನು ನೋಡಿ. ಇದೇ ಪರಿಹಾರದ ಅರ್ಜಿ ಸಲ್ಲಿಸಿದವರು ಸುಮಾರು ೨ ಸಾವಿರ ಜನ. ಪ್ರಾಮಾಣಿಕವಾಗಿ ನೋಡಿದರೆ, ಅದರಲ್ಲಿ ಎಷ್ಟೋ ಜನರಿಗೆ ಅಂಥಾ ನಷ್ಟವೇನೂ ಆಗಿಲ್ಲ. ಇನ್ನು ಕೆಲವರಿಗೆ ಅಷ್ಟಿಷ್ಟು ನಷ್ಟ ಆಗಿದ್ದರೂ ತಡಕೊಳ್ಳಲಾರದಷ್ಟೇನಲ್ಲ. ಒಂದು ನಾಕ್ಕೈದು ನೂರು ಜನರಿಗೆ ನಿಜವಾಗಿ ಪರಿಹಾರ ಕೊಡಬೇಕಾಗುತ್ತಿತ್ತೇನೋ. ಸಂಘ ಅರ್ಜಿಗಳನ್ನು ಸೋಸಿ, ಅಗತ್ಯವಾದಷ್ಟನ್ನೇ ಕಳಿಸಿ ಈ ನಾಕ್ಕೈದು ನೂರು ಜನರಿಗೆ ಪರಿಹಾರ ಒದಗಿಸುವುದಕ್ಕೇ ಒತ್ತು ಕೊಟ್ಟಿದ್ದರೆ ಫಲ ಇರುತ್ತಿತ್ತೇನೊ. (ಏನೆಂದರೂ ನಷ್ಟ ಆಗದಿದ್ದವರೂ ಪರಿಹಾರ ಕೇಳುವ ಮೂಲಕ ನಿಜವಾಗಿ ನಷ್ಟ ಹೊಂದಿದವರಿಗೆ ಸಲ್ಲಬೇಕಾಗಿದ್ದುದನ್ನು ದೋಚುವುದಂತೂ ಅಕ್ಷಮ್ಯ, ಹೀನ, ಅಲ್ಲವೆ?) ಕಾರ್ಮಿಕರ ಸಂಘಗಳಿಗೆ ವೇದಾಂತ ಹೇಳುವ ನಮ್ಮ ಜನ ತಮ್ಮ ಸಂಘವನ್ನು ಉಪಯೋಗಿಸಿಕೊಳ್ಳುವ ನಡತೆ ಹೀಗೆ!

ಇನ್ನೊಂದು ಅಂಶ. ಮೊನ್ನೆ ಶೃಂಗೇರಿ ಅಡಿಕೆ ವಿಚಾರ ಸಂಕಿರಣಕ್ಕೆ ಸಾಕಷ್ಟು ಪ್ರಚಾರ ಇರಲಿಲ್ಲ ಅಂತ ದೊಡ್ಡ ಪುಕಾರು ಎದ್ದಿತು. ತೋಟಗಾರಿಕೆ ಇಲಾಖೆ ಹಳ್ಳಿಗಳ ಕಡೆ ಮತ್ತು ವ್ಯಾಪಕವಾಗಿ ಪ್ರಚಾರಕ್ಕೆ ಗಮನ ಕೊಡಲಿಲ್ಲ; ಕರ್ತವ್ಯದಲ್ಲಿ ಲೋಪ ಮಾಡಿದರು, ಒಪ್ಪುವಾ. ಆದರೆ ಇದನ್ನೇ ರೈತರ ದೃಷ್ಟಿಯಿಂದ ನೋಡೋಣ. ‘ಮುಂಜಾವು’, ‘ಶೃಂಕೊನ’ ಮತ್ತು ‘ಹೊಸ ದಿಗಂತ’— ಈ ಮೂರು ಪತ್ರಿಕೆಗಳೂ ಸಾಕಷ್ಟು ಮುಂಚಿತವಾಗಿಯೇ ಈ ಸುದ್ದಿಯನ್ನು ದೊಡ್ಡದಾಗಿ ಪ್ರಕಟಿಸಿದ್ದವು. ಇವುಗಳ ಪೈಕಿ ಒಂದಾದರೂ ಪತ್ರಿಕೆ ತಲುಪದಿರುವ ಬೆಳೆಗಾರರು —ಕನಿಷ್ಠ ಪಕ್ಷ ತಕ್ಕಮಟ್ಟಿನ ವಿದ್ಯಾವಂತರು— ಈ ಭಾಗದಲ್ಲಿ ಎಷ್ಟಿದ್ದಾರೆ? ಹಾಗಾದರೆ [...]

[...]ನ ಕೊಡುತ್ತಾರೆ ಎಂದಾಯಿತು?

ಹೀಗೆ ತಮ್ಮ ಪ್ರಯತ್ನವನ್ನೇ ಅವಲಂಬಿಸುವುದು, ಹತ್ತಾರು ಜನರ[...]ತ್ನ ಒಟ್ಟುಗೂಡಿಸಬಲ್ಲ ಸಂಘಟನೆ[...] ಪ್ರಯೋಜನ ಹೊಂದುವುದು—ಇಂ[...]ಘಟನೆಯ ಬೆಲೆಯನ್ನು, ತತ್ವವನ್ನು ರೈತರು ಅರಿಯುವುದು ಇನ್ಯಾವಾಗ?

ರಾಜ್ಯ ರೈತ ಸಂಘ ಇಷ್ಟು ವ್ಯಾಪ[...]ಗಿ ಬೆಳೆಯುತ್ತಿದೆ. ಅದರ ಹೋರಾಟದಿ[...] ಯಾರದೋ ಬಲಿದಾನದಿಂದ ಪ್ರತಿಫಲ[...] ನಮ್ಮವರ ಬಾಗಿಲಿಗೂ ಬರುತ್ತಿದೆ. ಇವ[...] ಏನು ಮಾಡುತ್ತಿದ್ದಾರೆ? ಆ ಫಲವನ್ನು[...]ದಲು ಅನುಭವಿಸುತ್ತಿದ್ದಾರೆ ಹೊರತು ಸಂ[...]ಕ್ಕೆ ಸೇರಿ ತಮ್ಮ ಹೆಗಲನ್ನೂ ಕೊಡೋ[...] ಎಂಬ ಮನೋಭಾವವಿಲ್ಲ. ಬದಲಿಗೆ ಅದ[...] ಬಗ್ಗೆ ಇದ್ದ–ಇಲ್ಲದ ಕೊಂಕುಗಳನ್ನೆಲ್ಲಾ ಎ[...]ಕೊಂಡು ಹೇಳಿದ್ದೇ ಹೇಳುತ್ತಾ ತಮ್ಮ ಅ[...]ಡ್ಡೆಯನ್ನು ಮುಚ್ಚಿಕೊಳ್ಳಲು ನೋಡುತ್ತಿದ್ದಾರೆ.

ಸಂಘಕ್ಕೆ ಸೇರಿ ಅದರ ಒಳ್ಳೆಯದನ್ನು ಬೆಂಬಲಿಸಿ, ತೀರ ಕೆಟ್ಟದ್ದನ್ನು ಕ್ರಮಬದ್ಧವಾಗಿ ವಿರೋಧಿಸಿ, ಗ[...]

ಸಂಪಾದಕ, ಮುದ್ರಕ ಮತ್ತು [...]

ಓದುಗರ ಪತ್ರಗಳು

"ಭದ್ರಾ ಮೇಲ್ದಂಡೆ ಯೋಜನೆ ನಾವೆಲ್ಲ ಒಟ್ಟಾಗಿ ವಿರೋಧಿಸಲೇಬೇಕು"

ಮಾನ್ಯರೆ,

ಭದ್ರಾ ಮೇಲ್ದಂಡೆ ಯೋಜನೆಯನ್ನು ವಿರೋಧಿಸಬೇಕೆಂದು ನೀವು ಪ್ರಕಟಿಸಿರುವ ಕರೆ ಅತ್ಯಂತ ವಿವೇಚನಾಯುತವೂ, ಸಕಾಲಿಕವೂ ಆಗಿದ್ದು, ಕೋಳಿ ಜಗಳವನ್ನೇ ದೊಡ್ಡದು ಮಾಡುತ್ತ ಕಾಲ ಕಳೆಯುವ ಮಲೆನಾಡಿನ ಹಲವು ಪತ್ರಿಕೆಗಳ ಕಣ್ಣು ತೆರೆಸುವಂಥದ್ದೂ ಆಗಿದೆ.

ನಾವೀಗ ಒಟ್ಟಾಗಿ ಹೋರಾಡಬೇಕಾಗಿದೆ ಮತ್ತು ಖಂಡಿತವಾಗಿ ಅಂಥ ಹೋರಾಟ ನಿಷ್ಫಲವಾಗುವುದಿಲ್ಲ. ಕೇರಳದಲ್ಲಿ 'ಮೌನ ಕಣಿವೆ' ಯೋಜನೆಯ ವಿರುದ್ಧ ಹೋರಾಡಿ ಪರಿಸರ ಪ್ರೇಮಿಗಳು ಗೆದ್ದಿದ್ದಾರೆ; ನಮ್ಮಲ್ಲೇ ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ಯೋಜನೆಯ ವಿರುದ್ಧ ಹೋರಾಡಿ ಅಲ್ಲಿನ ಜನ ಗೆದ್ದಿದ್ದಾರೆ (ಸದ್ಯಕ್ಕಾದರೂ.)

'ಮಾರಿ ಕಣ್ಣು ಹೋತನ ಮೇಲೆ' ಎಂಬಂತೆ ಈಗ ಕೆಲವು ರಾಜಕಾರಣಿಗಳು, ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಟಿಂಬರ್ ಕಂಟ್ರಾಕ್ಟರುಗಳ ಕಣ್ಣು ಬಾಳೆಹೊನ್ನೂರು ಆಸುಪಾಸಿನ ಕಾಡಿನ ಮೇಲೆ ಬಿದ್ದಿರುವಂತಿದೆ. ಆದರೆ, ಇದನ್ನು ಕಡಿಯುವ ಮುನ್ನ, ಈಗಾಗಲೇ ಕಡಿದಿರುವ ಕಾಡುಗಳಿಂದ ಆದ ನಷ್ಟ, ಆದರಿಂದ ಮಾಡಿದ ಯೋಜನೆಗಳಿಂದಾದ ಲಾಭ ಈ ಬಗ್ಗೆ ಸಂಬಂಧಪಟ್ಟವರು ಮೊದಲು ಲೆಕ್ಕ ಕೊಡಲಿ! ಲೆಕ್ಕದ ಮಾತು ಹಾಗಿರಲಿ. ಯಾವ ಕಾರಣಕ್ಕೂ ದಟ್ಟವಾದ ಈ ಅರಣ್ಯ, ಅಲ್ಲಿನ ವನ್ಯ ಮೃಗಗಳು, ರೂಢಿಸಿದ ಸಾವಿರಾರು ಎಕರೆ ಕಾಫಿ, ಏಲಕ್ಕಿ, ಅಡಿಕೆ, ತೆಂಗಿನ ತೋಟಗಳು ಇವನ್ನು ನಾವು – ಮಲೆನಾಡಿನವರು–ಬಲಿ ಕೊಡಬಾರದು. ಯಾರ ಎಂಥ ಲೆಕ್ಕಾಚಾರಕ್ಕೂ, ಬಣ್ಣದ ಮಾತಿಗೂ, ಪಕ್ಷ ಪ್ರೇಮಕ್ಕೂ ನಾವು ಮೋಸ ಹೋಗಬಾರದು.

ಪ್ರಕೃತಿಯನ್ನು ಹೀಗೆ ಕೊಲ್ಲುವುದು ಮಾತೃಹಂತಕ ಬುದ್ಧಿ. ಕೊಲ್ಲಬೇಕೆನ್ನುವವರಿಗೆ ನಾವು ವಿವೇಕ ಹೇಳೋಣ. ಕೇಳದಿದ್ದರೆ ಗಾಂಧೀ ಮಾರ್ಗವನ್ನು ಕಟ್ಟುನಿಟ್ಟಾಗಿ ಅನುಸರಿಸೋಣ. ಅವಶ್ಯಕತೆ ಬಂದರೆ ಈ ವಿಷಯದಲ್ಲಿ–ಆ ಪದದ ನಿಜವಾದ ಅರ್ಥದಲ್ಲಿ–ಜೀವದ ಹಂಗು ತೊರೆದು ಹೋರಾಡೋಣ. ನಾವು ಮಾಡುತ್ತಿರುವುದು ಮಾನವ ಪೀಳಿಗೆಗೆ – ನಮಗೇ – ಅತ್ಯಂತ ಕಲ್ಯಾಣಕಾರಕವಾದ ಮಹತ್ಕಾರ್ಯ ಎಂದು ನೆನಪಿಟ್ಟುಕೊಳ್ಳೋಣ. ನಮಗೆ ಜಯ ಶತಸಿದ್ಧ.

—ಎಚ್. ಸುಂದರ ರಾವ್,
ಬಿ.ಸಿ. ರೋಡು, ದ.ಕ.

ಟ್ರೈಸಮ್ ಯೋಜನೆ: ತರಬೇತಿ ಅಭ್ಯರ್ಥಿಗಳ ಆಯ್ಕೆಯಲ್ಲಿ ಪಕ್ಷಪಾತವೆ, ರಾಜಕೀಯವೆ?

ಮಾನ್ಯರೆ,

ಟ್ರೈಸಮ್ ಯೋಜನೆಯಲ್ಲಿ ಹೊಲಿಗೆ ತರಬೇತಿ, ರೇಡಿಯೋ ರಿಪೇರಿ, ವಾಚ್ ರಿಪೇರಿ, ಆಟೋವರ್ಕ್ಸ್ ಮುಂತಾದವುಗಳಿಗೆ ತರಬೇತಿ ಕೊಡಲು ಕೊಪ್ಪ ತಾಲ್ಲೂಕಿನಲ್ಲಿ ಸಂದರ್ಶನ ಕರೆಯಲಾಗಿತ್ತು. ಒಟ್ಟು ೪೭ ಅಭ್ಯರ್ಥಿಗಳ ಆಯ್ಕೆಯಲ್ಲಿ ಹರಿಹರಪುರ ಹೋಬಳಿಗೆ ೨೭, ಕಸಬಾ ಹೋಬಳಿಗೆ ೧೬ ಹಾಗೂ ಮೇಗುಂದಾ ಹೋಬಳಿಗೆ ೪ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಮೇಗುಂದಾ ಹೋಬಳಿಯಿಂದ, ಸಂದರ್ಶನ ಅಧಿಕಾರಿಗಳು ಮೊದಲೇ ತಿಳಿಸಿದಂತೆ ಎಲ್ಲಾ ಅರ್ಹತೆಗಳಿದ್ದ ಒಟ್ಟು ೫೨ ಜನ ಅಭ್ಯರ್ಥಿಗಳು ಸಂದರ್ಶನಕ್ಕೆ ಬಂದಿದ್ದರು. ಆದರೆ, ಕೇವಲ ೪ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು ನೋಡಿದರೆ ಇದರಲ್ಲಿ ರಾಜಕಾರಣಿಗಳ ಒತ್ತಡವೊ ಅಥವಾ ಅಧಿಕಾರಿಗಳ ಒತ್ತಡವೊ ತಿಳಿಯದಾಗಿದೆ.

ಸಂದರ್ಶನಕ್ಕೆ ಚಿಕ್ಕಮಗಳೂರಿನಿಂದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಬಂದಿದ್ದರು. ಆದರೆ ಅಲ್ಲಿ ಹೋಬಳಿ ಮಟ್ಟದ ಗ್ರಾಮ ಸೇವಕರುಗಳೇ ಸಂದರ್ಶನಾಧಿಕಾರಿಗಳಂತೆ ಕಂಡು ಬಂತು. "ಇವರನ್ನು ಆಯ್ಕೆ ಮಾಡಿ,.... ಇವರನ್ನು ಬೇಡ" ಎಂದು ಹೇಳುತ್ತಿದ್ದರು.

ಸಂದರ್ಶನ ಮುಗಿದ ಮೇಲೆ, ಕೈಗಾರಿಕಾ ವಿಸ್ತರಣಾಧಿಕಾರಿಗಳು ಗ್ರಾಮಸೇವಕರನ್ನೆ ಕೇಳಿ ಆಯ್ಕೆ ಪಟ್ಟಿ ಮಾಡಿದರೆಂಬ ವದಂತಿಯೂ ಇದೆ.

ಇಂತಹ ಅನ್ಯಾಯಗಳಾಗದಂತೆ ಇನ್ನು ಮುಂದಾದರೂ ಸಂದರ್ಶನ ಅಧಿಕಾರಿಗಳು ಎಚ್ಚರವಹಿಸಿ, ಎಲ್ಲಾ ಹೋಬಳಿಗಳಿಗೂ ಪ್ರಾತಿನಿಧ್ಯ ಕೊಡುವರೆಂದು ಆಶಿಸೋಣವೆ? ಈ ವಿಷಯವನ್ನು ಶೃಂಗೇರಿ ಕ್ಷೇತ್ರದ ಶಾಸಕರ ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೂ ತರಲಾಗಿದೆ.

—ನೊಂದವರು,
(೭ ಜನರ ಸಹಿ ಇದೆ)

ಶೃಂಗೇರಿ ಕ್ಷೇತ್ರದಲ್ಲಿ ಮಲ್ಲಿಕಾರ್ಜುನಯ್ಯ ಪ್ರವಾಸ

ಬಾಳೆಹೊನ್ನೂರು: ಮತದಾರರನ್ನು ಅಭಿನಂದಿಸುವುದು ಮತ್ತು ಸಾರ್ವಜನಿಕ ಕುಂದುಕೊರತೆ ಕೇಳುವುದಕ್ಕಾಗಿ ಅ. ೨೦ ಮತ್ತು ೨೧ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುವ ವಿಧಾನಪರಿಷತ್ ಸದಸ್ಯ ಎಸ್. ಮಲ್ಲಿಕಾರ್ಜುನಯ್ಯ ಅ... ೭.೪೫ಕ್ಕೆ ಇಲ್ಲಿ ಪದವಿ... ಮಾಡುವರು. ಮರುದಿನ... ಮತ್ತು ಕುಂದುಕೊರತೆ ... ಕ್ರಮಗಳು ಈ ಕೆಳಕಂಡ... ಶೋಧನಾ ಕೇಂದ್ರ (ಬೆ... (೧೧ಗಂ.), ಶೃಂಗೇರಿ (೧... ರಡಿ (೨ ಗಂ.), ಹರಿಹರ... ಕೊಪ್ಪ (ಸಂ. ೪ ಗಂ.), ನ... ೬ ಗಂಟೆಗೆ). ಕೊಪ್ಪದಲ್ಲಿ ... ಕಾರ್ಯಾಲಯದ ಉದ್ಘಾಟನೆ...

ಕೊಪ್ಪ... ಕೊರ...

ಕೊಪ್ಪ... ಪೂರ್ವಕವ... ನ್ನನುಸರಿಸಿ... ರತೆಗಳನ್ನು... ಗಿದೆಯೆಂದು...

ದಸರಾ ರ... ನ್ಯಾಸಕರ ನೇ... ದಾಗಿ ಶಾಸಕರು... ವಿದ್ಯಾರ್ಥಿಗಳು... ಕ್ರೀಡಾ ಸಾ... ಒದಗಿಸಲಾಗುತ್ತ... ನಲ್ಲಿ ನಡೆಯುವ... ಕೂಟಕ್ಕೆ ತಂಡ... ಪ್ರಿನ್ಸಿಪಾಲರು ನೀ... ಆಯ್ಕೆ ಕೂಡ ಮಾ... ನಂತರ ವಾಚನಾಲ... ವ ಹಾಗೂ ಎ.ಸಿ.... ಎಸ್.ಗಾಗಿ ಪ್ರಯತ್ನ... ಲಾಗಿದೆ–ಎಂದೂ ವಿ... ದ್ದಾರೆ.

ರಕ್ತದಾನ ಎಲ್ಲಕ್ಕಿಂತ ಶ್ರೇ... ರಕ್ತ ದಾನ ಮಾಡಿ... ಮಹಾದಾನಿಗಳೆನಿಸಿಕೆ...

—ಲಯನ್ಸ್ ಕ್ಲಬ್, ...

ಸಂಘಟನೆಯ ಬೆಲೆ

(೧ನೇ ಪುಟದಿಂದ)

ಇಲ್ಲೂ ಒಂದು 'ಜಿಲ್ಲಾ ಅಡಿಕೆ ಬೆಳೆಗಾರರ ಸಂಘ ಇದೆ. ಸುಮಾರು ನಮ್ಮ ಸ್ವಾತಂತ್ರ್ಯದಷ್ಟೇ ಹಳೆಯದು. ಆದರ ಸದಸ್ಯ ಬಲ? ಮೂರೂ ಮತ್ತೊಂದು! ಅದರ ಮುಂದಾಳುಗಳು ಎಷ್ಟೇ ಹೆಣಗಿದರೂ ರೈತರಿಗೆ ಸಂಘಟಿತರಾಗುವುದು ಬೇಕಾಗಿಲ್ಲವಂತೆ. ಕಳೆದ ಸಲ ಪರಿಹಾರಕ್ಕಾಗಿ ಅರ್ಜಿಗಳನ್ನು ಸಂಘದ ಮೂಲಕ ಸಲ್ಲಿಸುವುದಕ್ಕಾಗಿ ಒಂದೋ ಎರಡೋ ರೂಪಾಯಿ ಕೊಟ್ಟು ಒಂದೂವರೆ ಸಾವಿರದಷ್ಟು ಜನ ಸದಸ್ಯರಾಗಿದ್ದರು. ಅಷ್ಟಕ್ಕೆ ಅಲ್ಲಿಗೆ ಮುಗಿಯಿತು. ರೈತರನ್ನು ಆಕರ್ಷಿಸುವ, ಹಿಡಿದಿಡುವ, ತೊಡಗಿಸುವ ಯಾವುದೇ ವಿಶಿಷ್ಟ ಗುರಿ, ಕಾರ್ಯಕ್ರಮಗಳು ಸಂಘಕ್ಕೂ ಇದ್ದಂತಿಲ್ಲ.

ಹೀಗಾಗಿ, ಅನಾಹುತ ಬಂದಾಗ ರೈತರು, ದ.ಕ.ದವರಂತೆ ತಾವು ಏನು ಮಾಡಬೇಕು, ಏನೇನು ಸಾಧ್ಯತೆಗಳಿವೆ – ಎಂದು ತಲೆ ಬಳಸಲಿಲ್ಲ, ಅವರಂತೆ ತಮ್ಮ ಶಕ್ತಿ, ಸಾಮರ್ಥ್ಯಗಳನ್ನು ಒಟ್ಟುಗೂಡಿಸಲಿಲ್ಲ. ಸೀದಾ ಹೋಗಿ ಸರ್ಕಾರದ ಕಾಲಿಗೆ ಬಿದ್ದರು. ಸರ್ಕಾರ ತಲೆ ನೇವರಿಸಿತು. ನಂಬಿಕೊಂಡು ಬಂದರು. ದೆಹಲಿಯ ಐರಾವತ ಹಾಗಿರಲಿ, ಇಲ್ಲೇ ಇದ್ದ ಅಧಿಕಾರಿಗಳೂ ಇವರ ತೋಟಗಳೊಳಗೆ ಇಳಿಯಲಿಲ್ಲ. ಕೂತಲ್ಲೇ ಗುಣಾಕಾರ, ಭಾಗಾಕಾರ ಮಾಡಿ ಸೊನ್ನೆ ಬರೆದು ಕಳಿಸಿದರು. ಪ್ರಯತ್ನಕ್ಕೆ ತಕ್ಕ ಪ್ರತಿಫಲ!?

ಇದು ನಮ್ಮ ರೈತರ ಮನೋಭಾವಕ್ಕೆ ಹಿಡಿದ ಕನ್ನಡಿ.

ಈ ಮನೋಭಾವದ ಇನ್ನೊಂದೆರಡು ಲಕ್ಷಣಗಳನ್ನು ನೋಡಿ. ಇದೇ ಪರಿಹಾರದ ಅರ್ಜಿ ಸಲ್ಲಿಸಿದವರು ಸುಮಾರು ೨ ಸಾವಿರ ಜನ. ಪ್ರಾಮಾಣಿಕವಾಗಿ ನೋಡಿದರೆ, ಅದರಲ್ಲಿ ಎಷ್ಟೋ ಜನರಿಗೆ ಅಂಥಾ ನಷ್ಟವೇನೂ ಆಗಿಲ್ಲ. ಇನ್ನು ಕೆಲವರಿಗೆ ಅಷ್ಟಿಷ್ಟು ನಷ್ಟ ಆಗಿದ್ದರೂ ತಡಕೊಳ್ಳಲಾರದಷ್ಟೇನಲ್ಲ. ಒಂದು ನಾಕೈದು ನೂರು ಜನರಿಗೆ ನಿಜವಾಗಿ ಪರಿಹಾರ ಕೊಡಬೇಕಾಗುತ್ತಿತ್ತೇನೋ. ಸಂಘ ಅರ್ಜಿಗಳನ್ನು ಸೋಸಿ, ಅಗತ್ಯವಾದಷ್ಟನ್ನೇ ಕಳಿಸಿ ಈ ನಾಕೈದು ನೂರು ಜನರಿಗೆ ಪರಿಹಾರ ಒರಿಸುವುದಕ್ಕೇ ಒತ್ತು ಕೊಟ್ಟಿದ್ದರೆ ಫಲ ಇರುತ್ತಿತ್ತೇನೊ. (ಏನೆಂದರೂ ನಷ್ಟ ಆಗದಿದ್ದವರೂ ಪರಿಹಾರ ಕೇಳುವ ಮೂಲಕ ನಿಜವಾಗಿ ನಷ್ಟ ಹೊಂದಿದವರಿಗೆ ಸಲ್ಲಬೇಕಾಗಿದ್ದುದನ್ನು ದೋಚುವುದಂತೂ ಅಕ್ಷಮ್ಯ, ಹೀನ, ಅಲ್ಲವೆ?) ಕಾರ್ಮಿಕರ ಸಂಘಗಳಿಗೆ ವೇದಾಂತ ಹೇಳುವ ನಮ್ಮ ಜನ ತಮ್ಮ ಸಂಘವನ್ನು ಉಪಯೋಗಿಸಿಕೊಳ್ಳುವ ನಡತೆ ಹೀಗೆ!

ಇನ್ನೊಂದು ಅಂಶ. ಮೊನ್ನೆ ಶೃಂಗೇರಿ ಅಡಿಕೆ ವಿಚಾರ ಸಂಕಿರಣಕ್ಕೆ ಸಾಕಷ್ಟು ಪ್ರಚಾರ ಇರಲಿಲ್ಲ ಅಂತ ದೊಡ್ಡ ಪುಕಾರು ಆಯಿತು. ತೋಟಗಾರಿಕೆ ಇಲಾಖೆ ಹಳ್ಳಿಗಳ ಕಡೆ ಮತ್ತು ವ್ಯಾಪಕವಾಗಿ ಪ್ರಚಾರಕ್ಕೆ ಗಮನ ಕೊಡಲಿಲ್ಲ; ಕರ್ತವ್ಯದಲ್ಲಿ ಲೋಪ ಮಾಡಿದರು, ಒಪ್ಪುವಾ. ಆದರೆ ಇದನ್ನೇ ರೈತರ ದೃಷ್ಟಿಯಿಂದ ನೋಡೋಣ. 'ಮುಂಜಾವು', 'ಶೃಂಕೋನ' ಮತ್ತು 'ಹೊಸ ದಿಗಂತ'—ಈ ಮೂರು ಪತ್ರಿಕೆಗಳೂ ಸಾಕಷ್ಟು ಮುಂಚಿತವಾಗಿಯೇ ಈ ಸುದ್ದಿಯನ್ನು ದೊಡ್ಡದಾಗಿ ಪ್ರಕಟಿಸಿದ್ದವು. ಇವುಗಳ ಪೈಕಿ ಒಂದಾದರೂ ಪತ್ರಿಕೆ ತಲುಪದಿರುವ ಬೆಳೆಗಾರರು —ಕನಿಷ್ಠ ಪಕ್ಷ ತಕ್ಕಮಟ್ಟಿನ ವಿದ್ಯಾವಂತರು—ಈ ಭಾಗದಲ್ಲಿ ಎಷ್ಟಿದ್ದಾರೆ? ಹಾಗಾದರೆ ...

...ನ ಕೊಡುತ್ತಾರೆ ಎಂದಾಯಿತು? ಹೀಗೆ ತಮ್ಮ ಪ್ರಯತ್ನವನ್ನೇ ಅವಲಂಬಿಸುವುದು, ಹತ್ತಾರು ಜನರನ್ನು ಒಟ್ಟುಗೂಡಿಸಬಲ್ಲ ಸಂಘಟನೆ... ಪ್ರಯೋಜನ ಹೊಂದುವುದು—ಇ... ಘಟನೆಯ ಬೆಲೆಯನ್ನು, ತತ್ವವನ್ನು ರೈತರು ಅರಿಯುವುದು ಇನ್ಯಾವಾಗ?

ರಾಜ್ಯ ರೈತ ಸಂಘ ಇಷ್ಟು ವ್ಯಾಪಕವಾಗಿ ಬೆಳೆಯುತ್ತಿದೆ. ಅದರ ಹೋರಾಟ... ಯಾರದೋ ಬಲಿದಾನದಿಂದ ಪ್ರತಿಫಲ... ಮ್ಮವರ ಬಾಗಿಲಿಗೂ ಬರುತ್ತಿದೆ. ... ಏನು ಮಾಡುತ್ತಿದ್ದಾರೆ? ಆ ಫಲವನ್ನು... ದಲು ಅನುಭವಿಸುತ್ತಿದ್ದಾರೆ ಹೊರತು ಸಂ... ಕ್ಕೆ ಸೇರಿ ತಮ್ಮ ಹೆಗಲನ್ನೂ ಕೊಡೋ... ಎಂಬ ಮನೋಭಾವವಿಲ್ಲ. ಬದಲಿಗೆ ಅದ... ಬಗ್ಗೆ ಇದ್ದ-ಇಲ್ಲದ ಕೊಂಕುಗಳನ್ನೆಲ್ಲಾ ಎ... ಕೊಂಡು ಹೇಳಿದ್ದೇ ಹೇಳುತ್ತಾ ತಮ್ಮ ಅ... ಡ್ಡೆಯನ್ನು ಮುಚ್ಚಿಕೊಳ್ಳಲು ನೋಡುತ್ತಿದ್ದಾರೆ.

ಸಂಘಕ್ಕೆ ಸೇರಿ ಅದರ ಒಳ್ಳೆಯದನ್ನು ಬೆಂಬಲಿಸಿ, ತೀರ ಕೆಟ್ಟದ್ದನ್ನು ಕ್ರಮಬದ್ಧವಾಗಿ ವಿರೋಧಿಸಿ, ಗ... ಗಳನ್ನು ...

ಸಂಪಾದಕ, ಮುದ್ರಕ ಮತ್ತು ...